**ಗಂಗಾರಾಮ್ ಬಡೇರಿಯಾ,** ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿ (ಪಂ.ರಾ)
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಹಂತ, 3ನೇ ಮಹಡಿ
ಬಹುಮಹಡಿಗಳ ಕಟ್ಟಡ, ಬೆಂಗಳೂರು–1
ದೂ : 080–22384574/22032941
ಫ್ಯಾಕ್ಸ್ : 080–22389520
ಇ–ಮೇಲ್ : secyrdpr@gmail.com
secy-rdpr@Karnataka.gov.in

**ಅ.ಸ. ಪತ್ರ ಸಂ.ಗ್ರಾಅಪ 139 ಜಿಪಸ 2012(ಪಿ3)** **ದಿನಾಂಕ 07.03.2014**

**ಮಾನ್ಯರೆ,**

**ವಿಷಯ:**2012–13 ಹಾಗೂ 2013–14 ನೇ ಸಾಲಿನ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದ ಅನುದಾನದ ಕುರಿತು ಬಳಕೆಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಕುರಿತು.

**ಉಲ್ಲೇಖ:**1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2013(ಪಿ–3) ದಿನಾಂಕ 29.07.2013
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2013(ಪಿ–3) ದಿನಾಂಕ 09.01.2014
3. ಸಮಸಂಖ್ಯೆಯ ಸರ್ಕಾರದ ಆದೇಶ ದಿನಾಂಕ 16.01.2014.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 132 ಜಿಪಸ 2013 ದಿನಾಂಕ 16.01.2014.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2013(ಪಿ–3) ದಿನಾಂಕ 18.01.2014.

******

ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಡಿಯಲ್ಲಿ ಭಾರತ ಸರ್ಕಾರವು ರಾಜ್ಯ ಸರ್ಕಾರಕ್ಕೆ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಸದರಿ ಅನುದಾನದ ಬಳಕೆಯ ಪ್ರತಿಶತ 60% ರಷ್ಟನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಭಾರತ ಸರ್ಕಾರಕ್ಕೆ ಕಳುಹಿಸಿಕೊಟ್ಟಲ್ಲಿ 2ನೇ ಕಂತಿನ ಅನುದಾನವನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಪಡೆಯಲು ಅನುಕೂಲವಾಗುತ್ತದೆ. ಇದು ಅನುದಾನ ಬಿಡುಗಡೆಗೆ ಮುಖ್ಯವಾದ ಷರತ್ತಾಗಿರುತ್ತದೆ.

ಆದುದರಿಂದ ಈ ಯೋಜನೆಯ ಕುರಿತು ಬಳಕೆಯ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸದರಿ ವಿಷಯವನ್ನು ದಿನಾಂಕ:15.02.2014ರ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಹಾಜರಿದ್ದ ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಡಲಾಗಿರುತ್ತದೆ. ಮುಂದುವರೆದು ಮಿಂಚಂಚೆ(ಇ–ಮೇಲ್)ಯ ಮುಖಾಂತರವು ಸಹ ಈ ವಿಷಯದ ಬಗ್ಗೆ ತಿಳಿಸಲಾಗಿದೆ. ಆದರೆ ಇದುವರೆವಿಗೂ ಯಾವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದಲೂ ಅನುದಾನ ಬಳಕೆ ಪ್ರಮಾಣ ಪತ್ರಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಆದುದರಿಂದ ಜಿಲ್ಲಾ ಪಂಚಾಯತ್‌ನ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ವಿಷಯವನ್ನು ಪ್ರಥಮ ಆದ್ಯತೆಯ ಮೇಲೆ ಪರಿಗಣಿಸಿ ಕೋರಿರುವ ಮಾಹಿತಿಯನ್ನು ಸರ್ಕಾರಕ್ಕೆ ಮರುಟಪಾಲಿನಲ್ಲಿ ಕಳುಹಿಸಿಕೊಡಬೇಕೆಂದು ಕೋರಲಾಗಿದೆ. ಇದು ತಮ್ಮ ವೈಯಕ್ತಿಕ ಹೊಣೆಯಾಗಿರುತ್ತದೆ. ಸರ್ಕಾರದಿಂದ ಈ ಕುರಿತು ಮತ್ತೊಮ್ಮೆ ನೆನಪೋಲೆಗೆ ಅವಕಾಶ ನೀಡದೆ ಅಗತ್ಯ ಮಾಹಿತಿಯನ್ನು ಸಲ್ಲಿಸಿದರೆ ಮಾತ್ರ ಕೇಂದ್ರ ಸರ್ಕಾರದಿಂದ 2ನೇ ಕಂತಿನ ಅನುದಾನವನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬ ಅಂಶವನ್ನು ಪುನರುಚ್ಚರಿಸಲಾಗಿದೆ.

ಅನುದಾನ ಬಿಡುಗಡೆಯ ಬಗ್ಗೆ ಹೊರಡಿಸಿದ ಆದೇಶಗಳ ಬಗ್ಗೆ ಕೆಳಕಂಡಂತೆ ಮತ್ತೊಮ್ಮೆ ಮಾಹಿತಿ ನೀಡಿದೆ. ಉಲ್ಲೇಖ(1)ರ ಸರ್ಕಾರದ ಆದೇಶದ ಮೂಲಕ 2012–13 ನೇ ಸಾಲಿನಲ್ಲಿ ಸಿ.ಎಸ್.ಎ.ಡಿ ದತ್ತಾಂಶಗಳ (2010–11) ಪ್ರಕಾರ ಸ್ವಂತ ಸಂಪನ್ಮೂಲ ಕೊರತೆ ಎದುರಿಸುತ್ತಿರುವ ರಾಜ್ಯದ 600 ಗ್ರಾಮ ಪಂಚಾಯತಿಗಳಿಗೆ ತಲಾ 50,000/–ಗಳಂತೆ ಅನುದಾನವನ್ನು ಅಂದರೆ ಒಟ್ಟಾರೆ ರೂ.3.00ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಮತ್ತು ಕೆಲವೊಂದು ನಿಬಂಧನೆಗೊಳಪಟ್ಟು ಬಿಡುಗಡೆಮಾಡಲಾಗಿರುತ್ತದೆ.

ಅದೇ ರೀತಿ ಉಲ್ಲೇಖ(2)ರ ಸರ್ಕಾರದ ಆದೇಶದನ್ವಯ 2013–14ನೇ ಸಾಲಿನ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯ ಅನುಷ್ಠಾನದಲ್ಲಿ ರಾಜ್ಯದ 418 ಗ್ರಾಮ ಪಂಚಾಯತಿಗಳಿಗೆ ತಲಾ 3 ಲಕ್ಷ ರೂ.ಗಳನ್ನು ದುರಸ್ತಿ ಹಾಗೂ ಉನ್ನತೀಕರಣ ಮಾಡುವ ಸಲುವಾಗಿ ಒಟ್ಟಾರೆ ರೂ.12.54 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಅದೇ ರೀತಿ ಉಲ್ಲೇಖ(3)ರ ಸರ್ಕಾರದ ಆದೇಶದನ್ವಯ 2012-13ನೇ ಸಾಲಿನ ಐ.ಇ.ಸಿ ಅನುದಾನವನ್ನೊಳಗೊಂಡು 2013-14ನೇ ಸಾಲಿನ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಮಾಹಿತಿ, ಶಿಕ್ಷಣ ಹಾಗೂ ಸಂವಹನ ಕಾರ್ಯಕ್ರಮಗಳಿಗೆ ತಲಾ 1195/-ರೂ.ಗಳ ಒಟ್ಟಾರೆ ರೂ.67,26,713 ಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಅದೇ ರೀತಿ ಉಲ್ಲೇಖ(4) ಸರ್ಕಾರದ ಆದೇಶದನ್ವಯ 2013-14ನೇ ಸಾಲಿಗೆ ಸಿ.ಎಸ್.ಎ.ಡಿ ದತ್ತಾಂಶಗಳ (2010-11) ಪ್ರಕಾರ ಸ್ವಂತ ಸಂಪನ್ಮೂಲ ಕೊರತೆ ಎದುರಿಸುತ್ತಿರುವ ರಾಜ್ಯದ 600 ಗ್ರಾಮ ಪಂಚಾಯತಿಗಳಿಗೆ ತಲಾ 50,000/-ಗಳಂತೆ ಅನುದಾನವನ್ನು ಅಂದರೆ ಒಟ್ಟಾರೆ ರೂ.3.00ಕೋಟಿಗಳನ್ನು ಬಿಡುಗಡೆಮಾಡಲಾಗಿರುತ್ತದೆ

ಮುಂದುವರೆದು ಉಲ್ಲೇಖ(5) ಸರ್ಕಾರದ ಆದೇಶದನ್ವಯ 2013-14ನೇ ಸಾಲಿನ ರಾಜ್ಯದಲ್ಲಿ ಹೊಸದಾಗಿ ಸೃಜನೆಯಾಗಿರುವ ಜಲಾಲಪುರ ಹಾಗೂ ಗಾಂಧಿನಗರ ಗ್ರಾಮ ಪಂಚಾಯತಿಗಳಿಗೆ ತಲಾ 15 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸಿ ಆದೇಶಿಸಿದೆ.

**ಆದರಗಳೊಡನೆ,**

**ತಮ್ಮ ವಿಶ್ವಾಸಿ,**

**ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.**